# ವಾಮಾಚಾರ ತಂತ್ರ ವಿದ್ಯೆಯ ರೂಪ

**ಆರ್. ವೆಂಕಟರಾಜು**
ಸ್ಟಾರ್ ಸುವರ್ಣದ 'ಉಧೋ ಉಧೋ ಶ್ರೀ ರೇಣುಕಾ ಯಲ್ಲಮ್ಮ'ದ ಮಂತ್ರವಾದಿ

■ ರಾಘವೇಂದ್ರ ಕೆ.

◆ **ಬುದ್ಧ, ಬಸವಣ್ಣ, ಗಾಂಧಿ, ಅಂಬೇಡ್ಕರ್ ಮೊದಲಾದ ಪಾತ್ರಗಳನ್ನು ಮಾಡಿದ್ದೀರಿ. ಇಂತಹ ವ್ಯಕ್ತಿತ್ವಗಳನ್ನು ಪ್ರತಿನಿಧಿಸಲು ಯಾವ ರೀತಿಯ ತಯಾರಿ ಮಾಡಿಕೊಳ್ಳುತ್ತೀರಿ?**

ಓದು ನೆರವಿಗೆ ಬರುತ್ತದೆ. ಆತ್ಮಕಥೆ, ಜೀವನ ಚರಿತ್ರೆ, ಕಾದಂಬರಿಯನ್ನು ಓದುವಾಗ ಪಾತ್ರಗಳ ಪರಿಕಲ್ಪನೆ ಮಾಡಿಕೊಳ್ಳುತ್ತೇವೆ. ಅದು ಅಭಿನಯಕ್ಕೆ ತುಂಬ ನೆರವಾಗುತ್ತದೆ. ನಿರ್ದೇಶಕರು ಇಂತಹ ಪಾತ್ರವನ್ನು ಹೀಗೆ ಮಾಡಬೇಕು ಎಂದು ಹೇಳುತ್ತಾರೆ. ಆಗೆಲ್ಲ ಅದನ್ನು ಗ್ರಹಿಸಲು ನಮ್ಮ ಓದು ಮತ್ತು ಅನುಭವದ ಸಾರ ಸಹಾಯ ಮಾಡುತ್ತದೆ. ಒಂದು ಓದಿನ ಹಿನ್ನೆಲೆಯಿಂದ ಬಂದರೆ, ನೋಟದಿಂದ ಹಲವಾರು ಪಾತ್ರಗಳನ್ನು ಕಲಾವಿದರಾಗಿ ಅಧ್ಯಯನ ಮಾಡಿರುತ್ತೇವೆ. ಅದರಿಂದಲೂ ಸ್ಫೂರ್ತಿ ಪಡೆಯುತ್ತೇವೆ. ಬುದ್ಧ ಬಸವರನ್ನು ನಾವು ನೋಡಿಲ್ಲ. ಐತಿಹಾಸಿಕ ವ್ಯಕ್ತಿತ್ವಗಳಾಗಿದ್ದರೂ ಅವರ ಬಗ್ಗೆ ಬೇರೆಯವರಿಂದ ಹೀಗೆ ಎಂದು ಕೇಳಿ, ಓದಿ ತಿಳಿದುಕೊಂಡಿರುತ್ತೇವೆ. ಪೌರಾಣಿಕ ಪಾತ್ರಗಳ ಬಗ್ಗೆ ಕಲ್ಪನೆ ಮಾತ್ರ ಇರುತ್ತದೆ. ಹೀಗಿರುವಾಗ ಪ್ರೇಕ್ಷಕನಿಗೆ ಮೆಚ್ಚುಗೆ ಆಗುವ ಚಿತ್ರಣವನ್ನು ನಾವು ಕೊಡಬೇಕಾಗುತ್ತದೆ.

◆ **ಅಭಿನಯವನ್ನೇ ವೃತ್ತಿಯಾಗಿ ಆಯ್ಕೆ ಮಾಡಿಕೊಂಡ ಹಿನ್ನೆಲೆ ಏನು?**

ನನ್ನ ತಂದೆ ರಂಗಭೂಮಿ ಕಲಾವಿದರು. ಅವರ ಜೊತೆ ನಾಟಕಗಳ ತಾಲೀಮುಗಳಿಗೆ ಹೋಗುತ್ತಿದ್ದೆ. ಅದರಿಂದ ಹೆಚ್ಚು ಪ್ರಭಾವಕ್ಕೆ ಒಳಗಾದೆ. ನಮ್ಮ ಕುಟುಂಬದಲ್ಲಿಯೂ ಪ್ರೋತ್ಸಾಹ ಸಿಕ್ಕಿದ್ದರಿಂದ ರಂಗ ಚಟುವಟಿಕೆ ಆರಂಭವಾಯಿತು. ನಾಟಕ ಅತ್ಯಂತ ಮೆಚ್ಚುಗೆಯ ಕ್ಷೇತ್ರ. 'ಮೂಕಬಲಿ' ನಾಟಕದಲ್ಲಿ ಬಾಲನಟನಾಗಿ ಮೊದಲು ಕಾಣಿಸಿಕೊಂಡೆ. ಆ ಅಭಿನಯಕ್ಕೆ ಬಾಲನಟ ಪ್ರಶಸ್ತಿ ಸಿಕ್ಕಿತು. ಅದು ರಂಗಭೂಮಿಯಲ್ಲಿ ತೊಡಗುವ ಶಕ್ತಿಯನ್ನು ನೀಡಿತು. ಅದಾದ ನಂತರ ಕನ್ನಡ ರಂಗಭೂಮಿಯ ಪ್ರಮುಖ ನಿರ್ದೇಶಕರ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿತು. ಕಿರುತೆರೆ–ಸಿನಿಮಾಗಳಲ್ಲೂ ಬಾಲ ನಟನಾಗಿದ್ದೆ. ಈ ಆಕರ್ಷಣೆಯ ಸೆಲೆಗೆ ಒಲಿದು ಅಭಿನಯವನ್ನು ರೂಢಿಸಿಕೊಂಡೆ.

◆ **ಯಲ್ಲಮ್ಮನ ಧಾರಾವಾಹಿಯಲ್ಲಿ ಮಂತ್ರವಾದಿ ಪಾತ್ರದ ಔಚಿತ್ಯದ ಬಗ್ಗೆ ಏನು ಹೇಳುತ್ತೀರಿ?**



ಅದನ್ನೆಲ್ಲ ತಾಂತ್ರಿಕ ವಿದ್ಯೆ ಎಂದು ಹಿಂದಿನಿಂದ ಕರೆದುಕೊಂಡು ಬಂದಿದ್ದಾರೆ. ಇವತ್ತು ಅದು ಬೇರೆ ಬೇರೆ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ. ಮಂತ್ರವಾದಿಗಳು ಮೊದಲೆಲ್ಲ ಅರಣ್ಯವಾಸಿಗಳಂತೆ ಇದ್ದರು. ರಾಜರ ಕಾಲದಲ್ಲಿಯೂ ಅವರಿಗೆ ಬೇಡಿಕೆ ಇತ್ತು. ಅವರು ಶತ್ರು ಮತ್ತು ದುಷ್ಟ ಶಕ್ತಿಗಳ ಸಂಹಾರಕ್ಕೆ ಪೂರಕವಾಗಿ ಕೆಲಸ ಮಾಡುತ್ತಿದ್ದರು ಎನ್ನುವ ನಂಬಿಕೆ ಇತ್ತು. ಅವರು ತಮ್ಮ ತಂತ್ರವನ್ನು ಗಾಳಿ, ಪಶು, ಪಕ್ಷಿಗಳ ಮೂಲಕ ನೆರವೇರಿಸುತ್ತಿದ್ದರು. ಅದನ್ನು ವಾಮಾಚಾರ ಎಂದೂ ಕರೆಯುತ್ತಾರೆ. ಪೌರಾಣಿಕ ಪಾತ್ರದಲ್ಲಿ ಪ್ರೇಕ್ಷಕರ ಗಮನ ಸೆಳೆಯಲು ಅಂತಹ ಪಾತ್ರಗಳನ್ನು ಹೆಚ್ಚು ಪ್ರಸ್ತುತ ಮಾಡುತ್ತಿದ್ದಾರೆ. ಸಹಜ ಪಾತ್ರಗಳಿಗಿಂತ ವಿಕ್ಷಿಪ್ತ ಪಾತ್ರಗಳ ಬಗ್ಗೆ ಪ್ರೇಕ್ಷಕನಿಗೆ ಕುತೂಹಲ ಹೆಚ್ಚಿದೆ. ಅದು ಪಾಸಿಟಿವ್ ಆಗಿರಬಹುದು, ನೆಗೆಟಿವ್ ಆಗಿರಬಹುದು. ಪಾತ್ರ ಕೂಡ ದೈವ ಇಲ್ಲ ಅಸುರ ಇರಬಹುದು. ಯಾವುದೇ ಗುಣ ಇದ್ದರೂ ಆ ಬಗ್ಗೆ ಆಕರ್ಷಣೆ ಇರುತ್ತದೆ. ಭ್ರಾಮಕ ಜಗತ್ತಿಗೆ ಪ್ರವೇಶಿಸಲು ಇಂತಹ ಪಾತ್ರಗಳು ನೆರವಾಗುತ್ತವೆ. ಫ್ಯಾಂಟಸಿ ಜಗತ್ತನ್ನು ಎಳೆಯರು ಹೆಚ್ಚು ಇಷ್ಟಪಡುತ್ತಾರೆ. ಸಿನಿಮಾ–ಕಿರುತೆರೆಯಲ್ಲಿ ಇಂತಹ ತಂತ್ರಗಳು ಯಶಸ್ವಿ ಕೂಡ ಆಗಿವೆ. ಯಲ್ಲಮ್ಮನಿಗೆ ಅಪಾರ ಭಕ್ತ ಸಮೂಹ ಇದೆ. ಅವಳ ಪವಾಡವನ್ನು ಎಲ್ಲರೂ ಅವರದೇ ಆದ ಕಲ್ಪನೆಯಲ್ಲಿ ಕಟ್ಟಿಕೊಂಡಿದ್ದಾರೆ. ಇಂತಹದ್ದನ್ನು ಅನೇಕರು ನೋಡಿ ಸಂತೋಷಪಡುತ್ತಾರೆ. ಇದರಲ್ಲಿ ಮನರಂಜನೆ ಭಕ್ತಿ ಎರಡೂ ಇರುತ್ತದೆ. ಪೌರಾಣಿಕ ಪಾತ್ರಗಳು ನಮ್ಮ ಬದುಕಿಗೆ ಹತ್ತಿರವಾಗಿರುವುದಿಲ್ಲ. ಅವು ಸವಾಲನ್ನು ಒಡ್ಡುತ್ತವೆ. ತುಂಬ ದಿನಗಳ ನಂತರ ಕಿರುತೆರೆಯಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಅದರಲ್ಲೂ ವಾಮಾಚಾರದ ಪಾತ್ರವನ್ನು ನಿರ್ವಹಿಸುತ್ತಿರುವುದು ವಿಶೇಷ.

◆ **ಬಣ್ಣದ ಲೋಕದಲ್ಲಿ ಇನ್ನೂ ಮಾಡಬೇಕು ಎಂದು ಉಳಿದಿರುವ ಪಾತ್ರ ಯಾವುದು?**

ಅದನ್ನು ಹಸಿವು ಎನ್ನಬಹುದು. ಅದಕ್ಕೆ ಕೊನೆ ಎಂಬುದು ಇಲ್ಲ. ಕಲಾವಿದ ಆದವನಿಗೆ ಪ್ರತಿ ಪಾತ್ರ ಮಾಡಿದಾಗಲೂ ಸಣ್ಣ ಅತೃಪ್ತಿ ಕಾಡುತ್ತದೆ. ಆತ ಅದನ್ನು ತುಂಬಿಸಿಕೊಳ್ಳಲು ಮತ್ತೊಂದು ಪಾತ್ರವನ್ನು ಹುಡುಕುತ್ತಾನೆ. ಆ ಅತೃಪ್ತಿ ಭಾವದಲ್ಲಿ ಚಲಿಸಿದಾಗಲೇ ತೃಪ್ತಿಯನ್ನು ಕಂಡುಕೊಳ್ಳಲು ಸಾಧ್ಯ. ಬಸವಣ್ಣ ಒಂದೇ ಪಾತ್ರವನ್ನು ರಂಗದ ಮೇಲೆ ಒಂದು ರೀತಿ ಅನಾವರಣ ಮಾಡಿದರೆ ಕ್ಯಾಮೆರಾ ಮತ್ತೊಂದು ರೀತಿಯಲ್ಲಿ ಬಿಂಬಿಸುತ್ತದೆ. ಅದೇ ಪಾತ್ರವನ್ನು ಮತ್ತೆ ಮತ್ತೆ ನಿರೂಪಿಸುವಾಗ ಬೇರೆ ರೀತಿಯ ಹೊಸ ಯೋಚನೆಗಳೂ ಬರುತ್ತವೆ. ■